## ಪುಸ್ತಕ ಪ್ರಕಟಣೆ–ಪ್ರಸಾರ

# ಅನುಭವಗಳು

ಕಳೆದ ವರ್ಷ ಅಂದರೆ 2021ರಲ್ಲಿ, ಕರ್ನಾಟಕ ಸಮಾಜವಾದಿ ವೇದಿಕೆ ಮತ್ತು ಬೆಂಗಳೂರು ದಲಿತ್ ಫೋರಮ್ ವತಿ ಯಿಂದ ಜನರಲ್ಲಿ–ವಿಶೇಷವಾಗಿ ವಿದ್ಯಾರ್ಥಿ ಯುವಜನರಲ್ಲಿ– ವೈಚಾರಿಕತೆಯನ್ನು ಬೆಳೆಸುವ ನಿಟ್ಟಿನಲ್ಲಿ ಕೆಲವಾರು ಪ್ರಯತ್ನಗಳನ್ನು ಮಾಡಲಾಯಿತು.

ಬೆಂಗಳೂರು ದಲಿತ್ ಫೋರಮ್ ಪ್ರಕಟಿಸಿದ ಮತ್ತು 'ವಿಚಾರ ಭಾರತ' ಪ್ರಕಟಿಸಿದ ಪುಸ್ತಕಗಳನ್ನು ವಿದ್ಯಾರ್ಥಿ–ಯುವಜನರಲ್ಲಿ ಪ್ರಸಾರ ಮಾಡಲಾಯಿತು.

ಶಾಲಾ ಕಾಲೇಜು ವಿದ್ಯಾರ್ಥಿಗಳು ಮತ್ತು ಇತರ ಯುವಜನರು ಸೇರುವ ಸಂದರ್ಭಗಳನ್ನು ಗಮನಿಸಿ, ಅವರ ಬಳಿಗೆ ಪುಸ್ತಕಗಳನ್ನು ಒಯ್ದು, ತಲುಪಿಸಲಾಯಿತು. ಗೂಗಲ್ ಮೀಟ್ ಸಭೆಗಳನ್ನು ನಡೆಸಿದಾಗ, ಪುಸ್ತಕಗಳ ಬಗ್ಗೆ ತಿಳಿಸಿ, ಆಸಕ್ತರು ಪಡೆದುಕೊಂಡು ತಮ್ಮ ಸುತ್ತ ಮುತ್ತಲ ವಿದ್ಯಾರ್ಥಿ ಯುವಜನರಲ್ಲಿ ಪ್ರಸಾರ ಮಾಡುವಂತೆ ಕೋರಲಾಯಿತು.

2021ರ ಕ್ಯಾಲೆಂಡರ್ ವರ್ಷ ಮುಗಿಯುವ ಹೊತ್ತಿಗೆ, 'ವಿಚಾರ ಭಾರತ' ಹೆಸರಿನಲ್ಲಿ ಒಟ್ಟು 12 ಪುಸ್ತಕಗಳನ್ನು ಪ್ರಕಟಿಸಲಾಗಿದೆ. (ಪಕ್ಕದಲ್ಲಿ ಪುಸ್ತಕಗಳ ವಿವರಗಳು ಇವೆ) ಅವುಗಳನ್ನು ವ್ಯಾಪಕವಾಗಿ ವಿದ್ಯಾರ್ಥಿ ಯುವಜನರಲ್ಲಿ ಪ್ರಸಾರ ಮಾಡಲಾಗಿದೆ. ಇದಕ್ಕಾಗಿ ಬೆಂಗಳೂರು ದಲಿತ್ ಫೋರಮ್ ಸಹಕಾರವನ್ನು ಪಡೆದುಕೊಳ್ಳಲಾಗಿದೆ.

**ವಿಶಿಷ್ಟ ಅನುಭವ**

ಪ್ರಾರಂಭದಲ್ಲಿ 'ಕರ್ನಾಟಕ ಸಮಾಜವಾದಿ ವೇದಿಕೆ' ವತಿಯಿಂದ ಮೂರು ಪುಸ್ತಕಗಳನ್ನು ಪ್ರಕಟಿಸಲಾಯಿತು. (ಈ ಪುಸ್ತಕಗಳ ಮಾಹಿತಿ ಮುಂದಿನ ಪುಟದಲ್ಲಿ ಇದೆ) ಅವುಗಳನ್ನು ಕೂಡ ವಿದ್ಯಾರ್ಥಿ–ಯುವಜನರಿಗೆ ತಲುಪಿಸುವ ಪ್ರಯತ್ನಗಳನ್ನು ನಡೆಸಲಾಗಿತ್ತು.

ಆದರೆ, ಆ ಸಂದರ್ಭದಲ್ಲಿ ವಿಶೇಷ ಅನುಭವ ಆಯಿತು. ಕೆಲವು ಶಾಲೆಗಳ ಮುಖ್ಯ ಶಿಕ್ಷಕರಿಗೆ/ಶಿಕ್ಷಕರಿಗೆ ಹಾಗೂ ಕೆಲವು ಕಾಲೇಜುಗಳ ಪ್ರಿನ್ಸಿಪಾಲರಿಗೆ/ಉಪನ್ಯಾಸಕರಿಗೆ/ಪ್ರಾಧ್ಯಾಪಕರಿಗೆ 'ಸಮಾಜವಾದಿ' ಎಂಬ ಶಬ್ದ ನಮ್ಮ ಪುಸ್ತಕಗಳ ಮೇಲೆ ಇರುವುದು ಸರಿ ಕಾಣಲಿಲ್ಲ. ಕೆಲವರು ಸ್ಪಷ್ಟವಾಗಿ ಇದನ್ನು ತಿಳಿಸಿದರು. ಇನ್ನೂ ಕೆಲವರು




**'ವಿಚಾರ ಭಾರತ' ಪ್ರಕಟಣೆಗಳು**

(ಮೇಲಿನ ಸಾಲು: ಎಡದಿಂದ ಬಲಕ್ಕೆ)

1. ಡಾ॥ ಬಿ.ಆರ್.ಅಂಬೇಡ್ಕರ್: ಕಾರ್ಮಿಕರ ಹಿತರಕ್ಷಕ 2. ನಮ್ಮ ಆಯ್ಕೆ ಯಾವುದು: ಬುದ್ಧನೋ? ಕಾರ್ಲ್ ಮಾರ್ಕ್ಸ್‌ನೋ? 3. ಗೃಹ ಹಿಂಸೆ ಕಾಯ್ದೆ: ಏನು? ಎತ್ತ? 4. ಸಮಾಜವಾದ ಕುರಿತು ಅಂಬೇಡ್ಕರ್ ನಿಲುವು 5. ಟಿಬೆಟ್ ಮತ್ತು ದಲ್ಯಾ ಲಾಮಾ 6. Dr. Ambedkar and India's Labour Class 7. ಭನವಾರಿ ದೇವಿ ಪ್ರಕರಣ ಮತ್ತು ಲೈಂಗಿಕ ಕಿರುಕಳ ತಡೆ ಮಾರ್ಗದರ್ಶಿ ಸೂತ್ರಗಳು 8. ದಲ್ಯಾ ಲಾಮಾ ಸಂಕ್ಷಿಪ್ತ ಜೀವನ ಮತ್ತು ಎರಡು ಭಾಷಣಗಳು 9. ಸ್ವಾಭಿಮಾನದ ಜ್ಯೋತಿ ಹೊತ್ತಿಸಿದ ಪೆರಿಯಾರ್ 10. ಮೈಸೂರು ಜಿಲ್ಲೆಯ ಗ್ರಾಮ ಪಂಚಾಯತ್ ಅಧ್ಯಕ್ಷರ ಸಾಮಾಜಿಕ–ಆರ್ಥಿಕ–ರಾಜಕೀಯ ಸ್ಥಿತಿಗತಿ 11. ಹಸಿರು ಕ್ರಾಂತಿಯ ಹರಿಕಾರ: ಬಾಬು ಜಗಜೀವನ ರಾಮ್ 12. ಮಾರ್ಗದರ್ಶಿ ರಾಮಮನೋಹರ ಲೋಹಿಯಾ

'ನೀವು ರಾಜಕೀಯ ವಿಚಾರ ತಿಳಿಸಲು, ಈ ಪುಸ್ತಕಗಳನ್ನು ಪ್ರಸಾರ ಮಾಡುತ್ತಿದ್ದೀರಿ' ಎಂಬ ಮಾತು ಬರುತ್ತದೆ'ಎಂದು ತಿಳಿಸಿದರು.

ಈ ಬಗ್ಗೆ ಅವರೊಂದಿಗೆ ವಾಗ್ವಾದ ಮಾಡುವುದು ಸೂಕ್ತ ಎನಿಸಲಿಲ್ಲ. ಕೆಲವರಿಗೆ ನಿಜಕ್ಕೂ ಈ ಶಬ್ದದ ಬಗ್ಗೆ ಆಕ್ಷೇಪ ಇರಬಹುದು; ಇನ್ನೂ ಕೆಲವರು ಬೇರೆಯವರ ಟೀಕೆಯನ್ನು ಎದುರಿಸುವುದು ಏಕೆ? ಎಂಬ ಭಾವನೆಯಿಂದ ಈ ಸಲಹೆಯನ್ನು ನೀಡಿರಬಹುದು.

ಒಟ್ಟಾರೆ, ನಿರ್ದಿಷ್ಟ ವಿಷಯಗಳ ಬಗ್ಗೆ ಪ್ರಕಟಿಸಿದ ಕಿರುಪುಸ್ತಕಗಳನ್ನು ವಿದ್ಯಾರ್ಥಿ ಯುವಜನರಿಗೆ ಮುಟ್ಟಿಸುವ ಕಾರ್ಯ ಮುಂದು

ವರೆಯುವುದು ಮುಖ್ಯ ಅಲ್ಲವೇ? ಎಂದು ಯೋಚಿಸಿ, ಆಗಿನಿಂದ 'ವಿಚಾರ ಭಾರತ' ಎಂಬ ಹೆಸರಿನಲ್ಲಿ ಮುದ್ರಿಸಿದ ಪುಸ್ತಕಗಳನ್ನು ಪ್ರಸಾರ ಮಾಡಿಕೊಂಡು ಬರಲಾಯಿತು.

**ಇನ್ನೊಂದು ಅನುಭವ**

ಎಸ್. ನಾಗರಾಜು ಉತ್ತಂಬಳ್ಳಿ ಇವರು ಮೈಸೂರು ಜಿಲ್ಲೆಯವರು. ವೃತ್ತಿಯಲ್ಲಿ ಶಿಕ್ಷಕರು. ಅಕ್ಟೋಬರ್ ತಿಂಗಳಲ್ಲಿ ತಮ್ಮ 'ಧಮ್ಮಪಥ ನಿಲಯ' ಹೊಸ ಮನೆಯ ಪ್ರವೇಶ ಕಾರ್ಯಕ್ರಮ ನಿಗದಿಪಡಿಸಿದಾಗ, ಮೂರು ಪುಸ್ತಕಗಳ ತಲಾ ನೂರು ಪ್ರತಿಗಳನ್ನು ತರಿಸಿಕೊಂಡು, ಆಹ್ವಾನಿತರಿಗೆ ಉಡುಗೊರೆ ರೂಪದಲ್ಲಿ ನೀಡಿ, ಉತ್ತಮ ಮಾದರಿಯನ್ನು ಹಾಕಿಕೊಟ್ಟರು.

ಇವರನ್ನು ಅನುಸರಿಸಿ, ಇವರ ತಮ್ಮ ಸಿದ್ದರಾಜು (ಇವರೂ ಶಿಕ್ಷಕರು) ಹೆಚ್ಚಿನ ಪುಸ್ತಕಗಳನ್ನು ತರಿಸಿಕೊಂಡು, ತಮ್ಮ ಶಾಲೆಯ ಇತರ ಶಿಕ್ಷಕರಿಗೆ ನೀಡಿ, ತಾವೂ ಇನ್ನೊಂದು ಮಾದರಿಯನ್ನು ಹಾಕಿಕೊಟ್ಟರು.

**ಮತ್ತೊಂದು ಅನುಭವ**


ಮೈಸೂರು ಜಿಲ್ಲೆಯ ತಲಕಾಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಲಿತ

**ಈ ಪುಟ್ಟ ವರದಿ ಬಗ್ಗೆ ನಿಮ್ಮ ಅನಿಸಿಕೆ–ಅಭಿಪ್ರಾಯಗಳನ್ನು ಸ್ವಾಗತಿಸಲಾಗುವುದು**

ಸಂಘರ್ಷ ಸಮಿತಿ, ಟಿ.ನರಸೀಪುರ ತಾಲ್ಲೂಕು ಶಾಖೆ ಹಮ್ಮಿಕೊಂಡಿದ್ದ 'ಸಂವಿಧಾನ ದಿನಾಚರಣೆ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ 'ನಮ್ಮ ಸಂವಿಧಾನ (ಅತಿ ಸಂಕ್ಷಿಪ್ತದಲ್ಲಿ)' ಕಿರುಪುಸ್ತಕದ 200 ಪ್ರತಿಗಳನ್ನು ತರಿಸಿಕೊಂಡವರು ಆಲಗೂಡು ಉಮಾಮಹದೇವ. ಇವರು ಮೈಸೂರು ದಸಂಸ ಜಿಲ್ಲಾ ಸಂಚಾಲಕರು.

**ಕಹಿ ಅನುಭವ**

ಈ ಪ್ರಯತ್ನಗಳನ್ನು ಮುಂದುವರೆಸುವಾಗ ಕಹಿ ಅನುಭವಗಳೂ ಆಗಿವೆ. ನನಗೆ ಚೆನ್ನಾಗಿ ಗೊತ್ತಿರುವ ಮಿತ್ರರಲ್ಲೇ ಕೆಲವರು, ತಾವೇ ಫೋನ್ ಮಾಡಿ 'ಶಾಲೆ–ಕಾಲೇಜು ವಿದ್ಯಾರ್ಥಿಗಳಿಗೆ ನೀಡಲು ಪುಸ್ತಕಗಳು ಬೇಕು' ಎಂದು ತಿಳಿಸಿ, ಪುಸ್ತಕಗಳನ್ನು ತರಿಸಿಕೊಂಡು, ವಿತರಣೆ ಮಾಡಿ, ನಂತರ ಅರ್ಧ ಹಣವನ್ನಾದರೂ ಕೊಡಲಿಲ್ಲ. ಇವರನ್ನು ನಾಲ್ಕಾರು ಸಾರಿ ಕೇಳಿದ ಬಳಿಕ ಕೆಲವೊಮ್ಮೆ ಪ್ರಯೋಜನ ಆಗಿದೆ. ಇನ್ನೂ ಕೆಲವೊಮ್ಮೆ ಪ್ರಯೋಜನ ಆಗಿಲ್ಲ. 'ಅಯ್ಯೋ




**'ಕರ್ನಾಟಕ ಸಮಾಜವಾದಿ ವೇದಿಕೆ' ಪ್ರಕಟಣೆಗಳು**

1. ನಮ್ಮ ಸಂವಿಧಾನ (ಅತಿ ಸಂಕ್ಷಿಪ್ತದಲ್ಲಿ) 2. ಅರಿವಿನ ಕಡೆಗೆ ನಮ್ಮ ನಡಿಗೆ: ಸೌಹಾರ್ದ ಭಾರತ ನಿರ್ಮಾಣ ನಮ್ಮ ಗುರಿ 3. ವಿರೋಧಾಭಾಸ ಕೂಡಲೇ ಕೊನೆಯಾಗಲಿ

ಪಾಪ. ಅವರೂ ನಮ್ಮವರೇ. ಇರಲಿ ಬಿಡು' ಎಂದು ನನಗೆ ನಾನೇ ಸಮಾಧಾನ ಹೇಳಿಕೊಂಡಿರುವೆ. ಇಂಥ ಅನುಭವಗಳು ನಮ್ಮನ್ನು ಕುಗ್ಗಿಸಬಾರದು, ಅಲ್ಲವೇ?

**ವಿಶೇಷ ಪ್ರೋತ್ಸಾಹ**

'ವಿಚಾರ ಭಾರತ' ಪ್ರಕಟಿಸಿದ ಕೆಲವು ಕಿರು ಪುಸ್ತಕಗಳಿಗೆ ಕೆಲವರಿಂದ ವಿಶೇಷ ಪ್ರೋತ್ಸಾಹ ದೊರಕಿದೆ. ಸಮಾಜದ ಬಗ್ಗೆ ಅಪಾರ ಕಾಳಜಿ ಇರುವ ಇಂಥ ಮಿತ್ರರು ಕಿರು ಪುಸ್ತಕಗಳ ಪ್ರಕಟಣೆಗೆ ಆರ್ಥಿಕ ಸಹಾಯ ಮಾಡಿದ್ದಾರೆ. ಅವರನ್ನು ಕೃತಜ್ಞತೆ ಯಿಂದ ನೆನಪಿಸಿಕೊಳ್ಳುವುದು ನನ್ನ ಕರ್ತವ್ಯ. ಅವರುಗಳೆಂದರೆ,

1. ಬೆಂಗಳೂರಿನ ಬಾಲು ವರದರಾಜನ್
2. ಜೋಗ್‌ಫಾಲ್ಸ್‌ನ ಜಿ.ಸಿ.ಮಹೇಂದ್ರ
3. ಬೆಂಗಳೂರಿನ ರಾಜು
4. ಚಿತ್ರದುರ್ಗ ಜಿಲ್ಲೆಯ ಇಂಜಿನಿಯರ್ ರೋಮರಾಜು.
5. ಬೆಂಗಳೂರಿನ ಅನಂತಪದ್ಮನಾಭನ್.

ಇಂಥವರ ಬೆಂಬಲ ಇರುವ ಕಾರಣಕ್ಕೆ 'ವಿಚಾರ ಭಾರತ' ಪ್ರಕಟಿಸಿದ ಕಿರುಪುಸ್ತಕ ಗಳ ನೂರಾರು ಪ್ರತಿಗಳನ್ನು ಉಚಿತವಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮತ್ತು ಯುವಜನರಿಗೆ ನೀಡಲು ಸಾಧ್ಯವಾಗಿದೆ.

**ಗಮನಿಸಿ**

* ನಿರ್ದಿಷ್ಟ ವಿಷಯದ ಬಗ್ಗೆ ಸಮಗ್ರ ಮಾಹಿತಿಯನ್ನು ಮತ್ತು ಪ್ರಗತಿಪರವಾದ ಒಳನೋಟವನ್ನು ನೀಡುವಂಥ ಕಿರುಪುಸ್ತಕಗಳನ್ನು ಬರೆದು ಕೊಡುವವರು
* ಕಿರುಪುಸ್ತಕಗಳನ್ನು ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಮತ್ತು ಯುವಜನರಲ್ಲಿ ಪ್ರಸಾರ ಮಾಡುವ ಕಾರ್ಯದಲ್ಲಿ ನೆರವು ನೀಡುವವರು
* ಕಿರುಪುಸ್ತಕಗಳನ್ನು ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಮತ್ತು ಯುವಜನರಲ್ಲಿ ಪ್ರಸಾರ ಮಾಡುವುದಕ್ಕೆ ಆರ್ಥಿಕ ಬೆಂಬಲ ನೀಡುವವರು
* ವಿಶೇಷವಾಗಿ ಶಾಲೆಗಳ ಮುಖ್ಯ ಶಿಕ್ಷಕರು/ಶಿಕ್ಷಕರು, ಪಿಯು ಕಾಲೇಜುಗಳ ಪ್ರಿನ್ಸಿಪಾಲರು/ಉಪನ್ಯಾಸಕರು, ಪದವಿ ಕಾಲೇಜುಗಳ ಪ್ರಿನ್ಸಿಪಾಲರು/ಪ್ರಾಧ್ಯಾಪಕರು ವಿಶ್ವವಿದ್ಯಾಲಯಗಳ ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿನ ಪ್ರಾಧ್ಯಾಪಕರ ಒತ್ತಾಸೆ ಬೇಕು.

ದಯಮಾಡಿ ನಮ್ಮನ್ನು ಸಂಪರ್ಕಿಸಿರಿ. ನಿಮ್ಮ ಸಲಹೆ, ಸಹಕಾರ, ಬೆಂಬಲ ನಮಗೆ ಅತ್ಯವಶ್ಯವಾಗಿದೆ. ನಿಮ್ಮಂಥವರ ಪಾಲ್ಗೊಳ್ಳುವಿಕೆ ಇಲ್ಲದೆ, ಪ್ರಗತಿಪರ ಸಾಹಿತ್ಯ ವನ್ನು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಮತ್ತು ಯುವಜನರಿಗೆ ತಲುಪಿಸುವುದು ಸಾಧ್ಯವಾಗುವುದಿಲ್ಲ.